ಭಾರತ ತಂಡಕ್ಕೆ ನಾಲ್ವರು ನೆಟ್ ಬೌಲರ್ಸ್ ನೆರವು

ಹೊಸದಿಲ್ಲಿ, ಆ. 5: ಎರಡು ಟೆಸ್ಟ್ ಪಂದ್ಯಗಳ ಸರಣಿಗಾಗಿ ಶ್ರೀಲಂಕಾ ಪ್ರವಾಸದಲ್ಲಿರುವ ಭಾರತ ತಂಡಕ್ಕೆ ನಾಲ್ವರು ನೆಟ್ ಬೌಲರ್‌ಗಳ ನೆರವು ಲಭಿಸಲಿದೆ. ಇವರೆಂದರೆ ಹರ್ಷ್ ದುಬೆ, ಶಿವಾಂಗ್ ಕುಮಾರ್, ತನುಷ್ ಕೋಟ್ಯಾನ್ ಮತ್ತು ವಿಪ್ರಾಜ್ ನಿಗಮ್.

ಒಂದು ದಿನದ ಹಿಂದಷ್ಟೇ ಕೊಲಂಬೊಗೆ ಬಂದಿಳಿದ ಭಾರತ ತಂಡ ಬುಧವಾರ ಮೊದಲ ಸುತ್ತಿನ ಅಭ್ಯಾಸ ನಡೆಸಿತು. ಇವರಿಗೆ ಕೋಚ್ ಗೌತಮ್ ಗಂಭೀರ್, ಆಯಾ ವಿಭಾಗದ ತರಬೇತುದಾರರು ಮಾರ್ಗದರ್ಶನ ನೀಡಿದರು.

ಕೊರಿಯಾ ಓಪನ್: ತನ್ವಿ ಮಾನ್ಸಿ, ಶ್ರೀಯಾಂಶಿ ಮುನ್ನಡೆ

ಅಸಾನ್ (ಕೊರಿಯಾ), ಆ. 5: ತೈಪೆ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಫಾರ್ಮನ್ನೇ ಮುಂದುವರಿಸಿದ ಭಾರತದ ಯುವ ಶಟ್ಲರ್ ತನ್ವಿ ಶರ್ಮ, 'ಕೊರಿಯಾ ಮಾಸ್ಟರ್ಸ್ ಸೂಪರ್ 300' ಪಂದ್ಯಾವಳಿಯ 2ನೇ ಸುತ್ತು ತಲುಪಿದ್ದಾರೆ. ವನಿತಾ ಸಿಂಗಲ್ಸ್ ವಿಭಾಗದಿಂದ ಶ್ರೀಯಾಂಶಿ ವಲಿಶೆಟ್ಟಿ ಮಾನ್ಸಿ ಸಿಂಗ್ ಕೂಡ ಮುನ್ನಡೆ ಸಾಧಿಸಿದ್ದಾರೆ.

17 ವರ್ಷದ, 3ನೇ ಶ್ರೇಯಾಂಕದ ತನ್ವಿ ಶರ್ಮ ಚೀನದ ಯುವಾನ್ ಆ್ಯನ್ ಕ್ವಿ ಅವರನ್ನು 21-16, 21-15 ಅಂತರದಿಂದ ಮಣಿಸಿದರು. ತನ್ವಿ ಅವರಿನ್ನು ಭಾರತದವರೇ ಆದ ಶ್ರೀಯಾಂಶಿ ವಲಿಶೆಟ್ಟಿ ವಿರುದ್ಧ ಆಡಲಿದ್ದಾರೆ. ಶ್ರೀಯಾಂಶಿ ಚೈನೀಸ್ ತೈಪೆಯ ಪೈ ಯು ಪೊ ವಿರುದ್ಧ 21-15, 21-14 ಅಂತರದ ಜಯ ಸಾಧಿಸಿದರು.

ಮಾನ್ಸಿ ಸಿಂಗ್ ದಕ್ಷಿಣ ಕೊರಿಯಾದ ಕಿಮ್ ಜೂ ಯುನ್ ವಿರುದ್ಧ ಮೊದಲ ಗೇಮ್ ಕಳೆದುಕೊಂಡೂ ಗೆದ್ದು ಬಂದರು. ಅಂತರ 14-21, 21-19, 21-9.

ಪುರುಷರಿಗೆ ಸೋಲು: ಪುರುಷರ ವಿಭಾಗದಲ್ಲಿ ಕೆ. ಶ್ರೀಕಾಂತ್, ಕಿರಣ್ ಜಾರ್ಜ್, ಮಿಥುನ್ ಮಂಜುನಾಥ್, ತರುಣ್ ಮನ್ನೆಪಲ್ಲಿ, ರೌನಕ್ ಚೌಹಾಣ್ ಮೊದಲ ಸುತ್ತಿನ ಆಘಾತಕ್ಕೆ ಸಿಲುಕಿದರು.

ಹರಿಯಾಣ: ಗೇಮ್ಸ್ ತಾರೆಗಳಿಗೆ 13.47 ಕೋ. ರೂ. ಬಹುಮಾನ

ಚಂಡೀಗಢ, ಆ. 5: ಗ್ಲಾಸ್ಗೊ ಕಾಮನ್ವೆಲ್ತ್‌ನಲ್ಲಿ ಪದಕ ಗೆದ್ದ ಮತ್ತು ಭಾಗವಹಿಸಿದ ಹರಿಯಾಣದ ಕ್ರೀಡಾಪಟುಗಳಿಗೆ ಆ. 7ರಂದು ಭವ್ಯ ಸಮ್ಮಾನ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗುವುದು, ಈ ಸಂದರ್ಭದಲ್ಲಿ 13.47 ಕೋಟಿ ರೂ. ನಗದು ಬಹುಮಾನವನ್ನು ವಿತರಿಸಲಾಗುವುದು ಎಂದು ಕ್ರೀಡಾ ಸಚಿವ ಗೌರವ್ ಗೌತಮ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಮುಖ್ಯ ಅತಿಥಿಯಾಗಿರುವರು. ಚಿನ್ನದ ಪದಕ ಗೆದ್ದ 7 ಮಂದಿಗೆ ತಲಾ 1.50 ಕೋಟಿ ರೂ., ಬೆಳ್ಳಿ ಜಯಿಸಿದ ಇಬ್ಬರಿಗೆ ತಲಾ 75 ಲಕ್ಷ ರೂ., ಕಂಚು ಗೆದ್ದವರಿಗೆ ತಲಾ 50 ಲಕ್ಷ ರೂ. ಬಹುಮಾನ ನಿಗದಿಯಾಗಿದೆ. ಇವರ ಜತೆಗೆ ಕೂಟದಲ್ಲಿ ಪಾಲ್ಗೊಂಡ 13 ಕ್ರೀಡಾಳುಗಳಿಗೆ ತಲಾ 7.5 ಲಕ್ಷ ರೂ. ನೀಡಲಾಗುವುದು ಎಂದು ಪ್ರಕಟನೆ ತಿಳಿಸಿದೆ.

ಟೀಮ್ ಇಂಡಿಯಾ ಶ್ರೀಲಂಕಾ ಪ್ರವಾಸ

600ನೇ ಟೆಸ್ಟ್ ಸಂಭ್ರಮದಲ್ಲಿ ಭಾರತ

ಹೊಸದಿಲ್ಲಿ, ಆ. 5: ಶ್ರೀಲಂಕಾ ಪ್ರವಾಸದಲ್ಲಿರುವ ಭಾರತೀಯ ಕ್ರಿಕೆಟ್ ತಂಡಕ್ಕೆ ಆ. 15ರಂದು ಡಬಲ್ ಸಂಭ್ರಮ. ಒಂದೆಡೆ ದೇಶದ ಸ್ವಾತಂತ್ರ್ಯ ದಿನದ ಖುಷಿಯಾದರೆ, ಇನ್ನೊಂದೆಡೆ ತನ್ನ ಕ್ರಿಕೆಟ್ ಇತಿಹಾಸದ 600ನೇ ಟೆಸ್ಟ್ ಪಂದ್ಯವನ್ನು ಆಡಲಿಳಿಯುವ ಹಿರಿಮೆ. ಅಂದು ಗಾಲೆಯಲ್ಲಿ ಆತಿಥೇಯ ಶ್ರೀಲಂಕಾವನ್ನು ಎದುರಿಸಲಿರುವ ಭಾರತದ ಪಾಲಿಗೆ ಇದು 600ನೇ ಟೆಸ್ಟ್ ಪಂದ್ಯದ ಮೈಲುಗಲ್ಲಾಗಿರಲಿದೆ.

ಭಾರತ 3ನೇ ದೇಶ

140 ವರ್ಷಗಳ ಸುದೀರ್ಘ ಟೆಸ್ಟ್ ಚರಿತ್ರೆಯಲ್ಲಿ ಕೇವಲ 3 ತಂಡಗಳು ಈ ಎತ್ತರ ತಲುಪಿವೆ. ಕ್ರಿಕೆಟ್ ಜನಕರೆಂಬ ಖ್ಯಾತಿಯ ಇಂಗ್ಲೆಂಡಿಗೆ ಇಲ್ಲಿ ಅಗ್ರಸ್ಥಾನ. ಅದು 1,097 ಟೆಸ್ಟ್ ಪಂದ್ಯಗಳನ್ನಾಡಿದೆ. ಸಾವಿರ ಟೆಸ್ಟ್ ಆಡಿರುವ ವಿಶ್ವದ ಏಕೈಕ ತಂಡವೆಂಬುದು ಇಂಗ್ಲೆಂಡ್ ಪಾಲಿನ ಗರಿಮೆ. ಇಂಗ್ಲೆಂಡ್ ಜತೆಯಲ್ಲೇ ಟೆಸ್ಟ್ ಕ್ರಿಕೆಟ್ ಆರಂಭಿಸಿದ ಆಸ್ಟ್ರೇಲಿಯ 882 ಪಂದ್ಯಗಳೊಂದಿಗೆ 2ನೇ ಸ್ಥಾನದಲ್ಲಿದೆ. ಭಾರತಕ್ಕೆ 3ನೇ ಸ್ಥಾನ. ಭಾರತದ ಹಿಂದೆಯೇ ವೆಸ್ಟ್ ಇಂಡೀಸ್ ಇದೆ. ಅದು ಪ್ರಸ್ತುತ 596ನೇ ಟೆಸ್ಟ್ ಆಡುತ್ತಿದೆ.

ಕೊಲಂಬೊ: ಭಾರತವನ್ನು 600ನೇ ಟೆಸ್ಟ್ ಪಂದ್ಯದಲ್ಲಿ ಮುನ್ನಡೆಸಲಿರುವ ಶುಭಮನ್ ಗಿಲ್ ಅವರಿಗೆ ಕೋಚ್ ಗೌತಮ್ ಗಂಭೀರ್ ಅವರಿಂದ ಮಾರ್ಗದರ್ಶನ.

ಭಾರತದ ಟೆಸ್ಟ್ ಸಾಧನೆ

ಪಂದ್ಯ	ಗೆಲುವು	ಸೋಲು	ಡ್ರಾ	ಟೈ
599	186	188	224	01

94 ವರ್ಷಗಳ ಸುದೀರ್ಘ ಟೆಸ್ಟ್ ಇತಿಹಾಸ

ಭಾರತ ಈವರೆಗಿನ 599 ಟೆಸ್ಟ್ ಪಂದ್ಯಗಳಲ್ಲಿ 186 ಗೆಲುವು ಕಂಡಿದೆ, 188ರಲ್ಲಿ ಸೋತಿದೆ, 224 ಡ್ರಾ ಫಲಿತಾಂಶಗಳಿವೆ, ಒಂದು ಪಂದ್ಯ ಟೈ ಆಗಿದೆ.

ಭಾರತ ತನ್ನ ಮೊದಲ ಟೆಸ್ಟ್ ಆಡಿದ್ದು 1932ರಲ್ಲಿ, 94 ವರ್ಷಗಳ ಸುದೀರ್ಘ ಕ್ರಿಕೆಟ್ ಇತಿಹಾಸ ನಮ್ಮದು. ಅಂದು ಕರ್ನಲ್ ಸಿ.ಕೆ. ನಾಯ್ಡು ನಾಯಕತ್ವದ, ಸ್ವಾತಂತ್ರ್ಯ ಪಡೆಯದ ಭಾರತ, ಲಾರ್ಡ್ಸ್‌ನಲ್ಲಿ ಇಂಗ್ಲೆಂಡನ್ನು ಎದುರಿಸಿತ್ತು. 'ಆಲ್ ಇಂಡಿಯಾ' ಹೆಸರಿನ ನಮ್ಮ ತಂಡ ಇದನ್ನು 158 ರನ್ನುಗಳಿಂದ ಕಳೆದುಕೊಂಡಿತು.

100ನೇ ಟೆಸ್ಟ್ ಭಾರತ ತನ್ನ 100ನೇ ಟೆಸ್ಟ್ ಪಂದ್ಯವನ್ನೂ ಇಂಗ್ಲೆಂಡ್ ವಿರುದ್ಧವೇ ಆಡಿತು. ಅದು 1967ರ ಎಜ್‌ಬಾಸ್ಟನ್ ಪಂದ್ಯ. ನಾಯಕ ಮನ್ಸೂರ್ ಅಲಿ ಖಾನ್ ಪಟೌಡಿ. ಇಂಗ್ಲೆಂಡ್ 132 ರನ್ನುಗಳಿಂದ ಭಾರತವನ್ನು ಮಣಿಸಿತು.

200ನೇ ಟೆಸ್ಟ್ ಭಾರತದ 200ನೇ ಟೆಸ್ಟ್ ಪಂದ್ಯದ ಎದುರಾಳಿ ಪಾಕಿಸ್ಥಾನ. ಅದು 1982ರ ಲಾಹೋರ್ ಪಂದ್ಯ. ನಾಯಕ ಸುನೀಲ್ ಗಾವಸ್ಕರ್. ಫಲಿತಾಂಶ-ಡ್ರಾ.

300ನೇ ಟೆಸ್ಟ್ ದಕ್ಷಿಣ ಆಫ್ರಿಕಾ ಎದುರಿನ ಈ ಟೆಸ್ಟ್ ಪಂದ್ಯವನ್ನು 1996ರಲ್ಲಿ ಅಹ್ಮದಾಬಾದ್‌ನಲ್ಲಿ ಆಡಲಾಯಿತು. ಸಚಿನ್ ತೆಂಡುಲ್ಕರ್ ನಾಯಕರಾಗಿದ್ದರು. ಭಾರತ 64 ರನ್ನುಗಳಿಂದ ಜಯಿಸಿತು.

400ನೇ ಟೆಸ್ಟ್ 2006ರ ವೆಸ್ಟ್ ಇಂಡೀಸ್ ಪ್ರವಾಸದ ವೇಳೆ ಕಿಂಗ್‌ಸ್ಟನ್‌ನಲ್ಲಿ ಭಾರತ ತನ್ನ 400ನೇ ಟೆಸ್ಟ್ ಆಡಿತು. ರಾಹುಲ್ ದ್ರಾವಿಡ್ ಸಾರಥ್ಯದ ಭಾರತ 49 ರನ್ನುಗಳ ಜಯ ಸಾಧಿಸಿತು.

500ನೇ ಟೆಸ್ಟ್ 2016ರ ನ್ಯೂಜಿಲ್ಯಾಂಡ್ ಎದುರಿನ ಕಾನ್ಪುರ ಪಂದ್ಯ ಭಾರತದ 500ನೇ ಟೆಸ್ಟ್ ಆಗಿತ್ತು. ವಿರಾಟ್ ಕೊಹ್ಲಿ ಪಡೆ ಇದನ್ನು 197 ರನ್ನುಗಳಿಂದ ಗೆದ್ದು ಸ್ಮರಣೀಯಗೊಳಿಸಿತು.

ಅಜಿತ್ ಅಗರ್ಕರ್ ಸ್ಥಾನಕ್ಕೆ ವಿವಿಎಸ್ ಲಕ್ಷ್ಮಣ್ ಆಯ್ಕೆ?

ಮುಂಬಯಿ, ಆ. 5: ಮುಂದಿನ ವರ್ಷದ ಏಕದಿನ ವಿಶ್ವಕಪ್‌ಗೂ ಮುನ್ನ ಯುವ ಭಾರತ ತಂಡವನ್ನು ಕಟ್ಟಬೇಕು, ಇದಕ್ಕಾಗಿ ರೋಹಿತ್ ಶರ್ಮ ಬದಲು ಯಶಸ್ವಿ ಜೈಸ್ವಾಲ್ ಅವರನ್ನು ಆಯ್ಕೆ ಮಾಡಬೇಕು ಎಂದು ಹೇಳಿದ್ದ ಅಜಿತ್ ಅಗರ್ಕರ್ ಅವರ ಸ್ಥಾನಕ್ಕೆ ಕುತ್ತು ಎದುರಾಗುವ ಸಾಧ್ಯತೆ ಇದೆ. ಮುಖ್ಯ ಆಯ್ಕೆದಾರ ಹುದ್ದೆಗೆ ಅಗರ್ಕರ್ ಬದಲು ವಿವಿಎಸ್ ಲಕ್ಷ್ಮಣ್ ಅವರನ್ನು ನೇಮಕ ಮಾಡುವ ಬಗ್ಗೆ ಬಿಸಿಸಿಐ ಚಿಂತನೆ ನಡೆಸುತ್ತಿದೆ.

ರೋಹಿತ್ ಶರ್ಮ ಅವರನ್ನು ತಂಡದಿಂದ ಕೈಬಿಡಬೇಕು ಎಂಬ ಹೇಳಿಕೆ ಬಿಸಿಸಿಐಯನ್ನು ಮುಜುಗರಕ್ಕೆ ಸಿಲುಕಿಸಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಬಿಸಿಸಿಐ, ರೋಹಿತ್ ತಂಡದಲ್ಲಿ ಉಳಿದುಕೊಳ್ಳಲಿದ್ದಾರೆ ಎಂಬ ಸ್ಪಷ್ಟನೆ ನೀಡಿತ್ತು.

ಸಿನ್ಸಿನಾಟಿ: ಹಿಂದೆ ಸರಿದ ಅಲ್ಕರಾಜ್

ಮ್ಯಾಡ್ರಿಡ್, ಆ. 5: ಇನ್ನೂ ಬಲಗೈ ಮಣಿಗಂಟಿನ ನೋವಿನಿಂದ ಗುಣಮುಖರಾಗದ ಕಾರ್ಲೋಸ್ ಅಲ್ಕರಾಜ್ 'ಸಿನ್ಸಿನಾಟಿ ಓಪನ್' ಟೆನಿಸ್ ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ.

ಇದು ವರ್ಷಾಂತ್ಯದ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್ ಪಂದ್ಯಾವಳಿಯ ಅಭ್ಯಾಸ ಕೂಟ. ಅಲ್ಕರಾಜ್ ಹಾಲಿ ಚಾಂಪಿಯನ್ ಆಗಿದ್ದಾರೆ.

'ಅಲ್ಕರಾಜ್ ಪ್ರಶಸ್ತಿ ಉಳಿಸಿಕೊಳ್ಳಲು ಈ ಬಾರಿ ಸಿನ್ಸಿನಾಟಿಗೆ ಆಗಮಿಸುತ್ತಿಲ್ಲ. ಆದಷ್ಟು ಬೇಗ ಟೆನಿಸ್ ಅಂಕಣಕ್ಕೆ ಮರಳಲು ಏನೆಲ್ಲ ಸಾಧ್ಯವೋ ಆ ಎಲ್ಲ ಪ್ರಯತ್ನಗಳನ್ನು ಅವರು ಮಾಡುತ್ತಿದ್ದಾರೆ. ಅವರು ಶೀಘ್ರ ಗುಣಮುಖ ರಾಗಲಿ' ಎಂದು ಕೂಟದ ನಿರ್ದೇಶಕ ಬಾಬ್ ಮಾರನ್ ಹೇಳಿದ್ದಾರೆ.

ಅಲ್ಕರಾಜ್ ಕಳೆದ ಎಪ್ರಿಲ್ ತಿಂಗಳಿಂದ ಈ ಸಮಸ್ಯೆಗೆ ಸಿಲುಕಿದ್ದಾರೆ. ಬಾರ್ಸಿಲೋನಾ ಓಪನ್ ಪಂದ್ಯಾವಳಿಯಲ್ಲಿ ಕೊನೆಯ ಸಲ ಆಡಿದ್ದರು. ಬಳಿಕ ಫ್ರೆಂಚ್ ಓಪನ್ ಹಾಗೂ ವಿಂಬಲ್ಡನ್ ಸೇರಿದಂತೆ ಇಡೀ ಗ್ರಾಸ್ ಕೋರ್ಟ್ ಸರಣಿಗಳನ್ನು ಕಳೆದುಕೊಂಡಿದ್ದರು.

ಆಸ್ಟ್ರೇಲಿಯದ ಭಾರತ ಪ್ರವಾಸ

ಕೃತಕ ಸ್ಪಿನ್ ಪಿಚ್ ರಚಿಸಿ ಅಭ್ಯಾಸ

ಮೆಲ್ಬರ್ನ್, ಆ. 5: ಮುಂದಿನ ವರ್ಷಾರಂಭದಲ್ಲಿ 'ಬೋರ್ಡರ್-ಗಾವಸ್ಕರ್ ಟ್ರೋಫಿ' ಟೆಸ್ಟ್ ಸರಣಿಗಾಗಿ ಭಾರತಕ್ಕೆ ಆಗಮಿಸಲಿರುವ ಆಸ್ಟ್ರೇಲಿಯ ತಂಡಕ್ಕೆ ಯಾವುದೇ ಅಭ್ಯಾಸ ಪಂದ್ಯ ಆಡುವುದಿಲ್ಲ. ಇದನ್ನು ಆಸೀಸ್ ತಂಡದ ಪ್ರಧಾನ ಕೋಚ್ ಆ್ಯಂಡ್ರ್ಯೂ ಮೆಕ್ ಡೊನಾಲ್ಡ್ ಹೇಳಿದ್ದಾರೆ. ಇದಕ್ಕಿಂತ ಕಿರು ಅಭ್ಯಾಸ ಶಿಬಿರವೇ ಹೆಚ್ಚು ಅನುಕೂಲ ಕರ ಎಂಬುದು ಅವರ ಅಭಿಪ್ರಾಯ.

'ಸ್ಥಳೀಯ ಪಿಚ್‌ಗಳಲ್ಲಿ ಅಭ್ಯಾಸ ಪಂದ್ಯವೆಲ್ಲ ನೆಪಮಾತ್ರಕ್ಕೆ. ಇದರ ಬದಲು ನಿರ್ದಿಷ್ಟವಾಗಿ ಸಿದ್ಧಪಡಿಸಿದ ಅಭ್ಯಾಸ ಶಿಬಿರ ಹೆಚ್ಚು ಪ್ರಯೋಜನ ಕಾರಿ. ಪರಿಸ್ಥಿತಿಗೆ ಹೊಂದಿಕೊಳ್ಳಲು ನಮಗೆ ಸಾಕಷ್ಟು ಕಾಲಾವಕಾಶ ಲಭಿಸಲಿದೆ ಎಂಬುದು ಆಸ್ಟ್ರೇಲಿಯ ಕ್ರಿಕೆಟ್ ಮಂಡಳಿಯ ಅಭಿಪ್ರಾಯ' ಎಂಬುದಾಗಿ ಮೆಕ್ ಡೊನಾಲ್ಡ್ ಹೇಳಿದರು.

ಅಭ್ಯಾಸಕ್ಕೆ ಕೃತಕ ಸ್ಪಿನ್ ಪಿಚ್

ವಿಶೇಷ ತಿರುವು ಪಡೆಯುವ ಭಾರತದ ಟ್ರ್ಯಾಕ್‌ಗಳಲ್ಲಿ ಕೃತಕ ಸ್ಪಿನ್ ಪಿಚ್ ರೂಪಿಸಿ ಅಭ್ಯಾಸ ರೂಪಿಸುವುದು ಆಸ್ಟ್ರೇಲಿಯದ ಕಾರ್ಯತಂತ್ರ. 2023ರ ಭಾರತ ಪ್ರವಾಸದ ವೇಳೆಯೂ ಕ್ರಿಕೆಟ್ ಆಸ್ಟ್ರೇಲಿಯ ಇದೇ ಯೋಜನೆ ರೂಪಿಸಿತ್ತು. ಸಿಡ್ನಿ ಓವಲ್ ಹಾಗೂ ಬೆಂಗಳೂರಿನ ಆಲೂರಿನಲ್ಲಿ ಕೃತಕ ಸ್ಪಿನ್ ಪಿಚ್ ನಿರ್ಮಿಸಿ ಅಭ್ಯಾಸ ನಡೆಸಿತ್ತು.

ದುಬ್ಯಾಯಲ್ಲಿ ವಿಶೇಷ ಶಿಬಿರ?

ಈ ಬಾರಿ ಸರಣಿ ಸಿದ್ಧತೆಗಾಗಿ ಆಸೀಸ್ ಯಾವ ನಗರವನ್ನು ಆಯ್ದುಕೊಳ್ಳಲಿದೆ ಎಂಬ ಕುತೂಹಲವಿದೆ. ಭಾರತದಲ್ಲಿ ಇಲ್ಲವಾದರೆ ದುಬ್ಯಾಯಲ್ಲಿ ವಿಶೇಷ ಶಿಬಿರ ಆಯೋಜಿಸಿ, ಕೃತಕ ಸ್ಪಿನ್ ಪಿಚ್ ನಿರ್ಮಿಸಿ ಅಭ್ಯಾಸ ನಡೆಸುವುದು ಕಾಂಗರೂ ಕ್ರಿಕೆಟ್ ಆಡಳಿತ ಮಂಡಳಿಯ ಯೋಜನೆ.

5 ಪಂದ್ಯಗಳ ಟೆಸ್ಟ್ ಸರಣಿ

ಇದು 5 ಟೆಸ್ಟ್ ಪಂದ್ಯಗಳ ಸುದೀರ್ಘ ಸರಣಿ. ಜ. 21ರಂದು ಆರಂಭಗೊಂಡು ಮಾ. 3ರ ತನಕ ಸಾಗಲಿದೆ. ಟೆಸ್ಟ್ ತಾಣಗಳೆಂದರೆ ನಾಗ್ಪುರ, ಚೆನ್ನೈ, ಗುವಾಹಟಿ, ರಾಂಚಿ ಮತ್ತು ಅಹ್ಮದಾಬಾದ್.

ಆಸ್ಟ್ರೇಲಿಯ ತಂಡ ಭಾರತಕ್ಕೆ ಆಗಮಿಸುವ ಮೊದಲು ನ್ಯೂಜಿಲ್ಯಾಂಡ್ ವಿರುದ್ಧ ತವರಿನ ಸರಣಿಯಲ್ಲಿ ಪಾಲ್ಗೊಳ್ಳಲಿದೆ.

ಅಹ್ಮದಾಬಾದ್ ತಲುಪಿದ ಕಾಮನ್ವೆಲ್ತ್ ಧ್ವಜ

ಅಹ್ಮದಾಬಾದ್, ಆ. 5: ಕಾಮನ್ವೆಲ್ತ್ ಗೇಮ್ಸ್ ಧ್ವಜ ಬುಧವಾರ ಅಹ್ಮದಾಬಾದ್ ತಲುಪಿತು. ಸಂಪ್ರದಾಯದಂತೆ ಇದನ್ನು ಗುಜರಾತ್ ಸಿಎಂ ಭೂಪೇಂದ್ರ ಪಟೇಲ್ ಅವರಿಗೆ ಹಸ್ತಾಂತರಿಸಲಾಯಿತು. ಇಲ್ಲಿ 2030ರ ಗೇಮ್ಸ್ ನಡೆಯಲಿದೆ.

ಗ್ಲಾಸ್ಗೊ ಗೇಮ್ಸ್ ಸಮಾರೋಪ ಸಮಾರಂಭದಲ್ಲಿ ಶಿಷ್ಟಾಚಾರದಂತೆ ಈ ಧ್ವಜವನ್ನು ಗುಜರಾತ್ ಉಪ ಮುಖ್ಯಮಂತ್ರಿ ಹರ್ಷ್ ಸಂಘ್ವಿ ಅವರಿಗೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಭಾರತೀಯ ಒಲಿಂಪಿಕ್ ಅಸೋಸಿಯೇಶನ್ ಅಧ್ಯಕ್ಷೆ ಪಿ.ಟಿ. ಉಷಾ, ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಮೊದಲಾದವರು ಉಪಸ್ಥಿತರಿದ್ದರು. ಬುಧವಾರ ಗಾಂಧಿ ನಗರದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಇದನ್ನು ಮುಖ್ಯಮಂತ್ರಿಯವರಿಗೆ ನೀಡಲಾಯಿತು.

ಗೌರವ, ಘನತೆಯೊಂದಿಗೆ ಹಸ್ತಾಂತರ

ಉಪ ಮುಖ್ಯಮಂತ್ರಿ ಹರ್ಷ್ ಸಂಘ್ವಿ ಅವರು ಕಾಮನ್ವೆಲ್ತ್ ಕ್ರೀಡಾಕೂಟದ ಧ್ವಜವನ್ನು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಸಂಪೂರ್ಣ ಗೌರವ ಮತ್ತು ಘನತೆಯೊಂದಿಗೆ ಅಧಿಕೃತವಾಗಿ ಹಸ್ತಾಂತರಿಸಿದರು ಎಂದು ಮುಖ್ಯಮಂತ್ರಿ ಸಚಿವಾಲಯದ ಪ್ರಕಟನೆ ತಿಳಿಸಿದೆ.

ಈ ಸಂದರ್ಭದಲ್ಲಿ ಗ್ಲಾಸ್ಗೊ ಕ್ರೀಡಾಕೂಟದಲ್ಲಿ ದೇಶವನ್ನು ಪ್ರತಿನಿಧಿಸಿದ ಗುಜರಾತಿನ ಪ್ಯಾರಾ ಆ್ಯಥ್ಲೀಟ್‌ಗಳಾದ ರಾಕೇಶ್ ಭಟ್, ರೋಹಿತ್ ಮೈಗುಲ್ ಉಪಸ್ಥಿತರಿದ್ದರು. ಪ್ಯಾರಾ ಟಿಟಿ ಆಟಗಾರ್ತಿ ಸೋನಲ್ ಪಟೇಲ್ ಕೂಡ ಇದಕ್ಕೆ ಸಾಕ್ಷಿಯಾದರು.

ಖೇಲೋ ಇಂಡಿಯಾ ವೆಚ್ಚ ಹಂಚಿಕೊಳ್ಳಿ: ರಾಜ್ಯಗಳಿಗೆ ಕರೆ

ಹೊಸದಿಲ್ಲಿ, ಆ. 5: ಮುಂದಿನ 5 ವರ್ಷಗಳಲ್ಲಿ ಖೇಲೋ ಇಂಡಿಯಾ ಯೋಜನೆಯ ವೆಚ್ಚವನ್ನು ರಾಜ್ಯಗಳೂ ಹಂಚಿಕೊಳ್ಳಬೇಕು ಎಂದು ಕೇಂದ್ರ ಸರಕಾರ ಸೂಚನೆ ನೀಡಿದೆ. ಯೋಜನೆಗಾಗಿ ಕೇಂದ್ರ ಸರಕಾರ ಶೇ.60ರಷ್ಟು ಹಣವನ್ನು ನೀಡಲಿದೆ. ಉಳಿದ ಶೇ. 40ರಷ್ಟನ್ನು ರಾಜ್ಯಗಳು ಭರಿಸಬೇಕು ಎಂದು ಸೂಚಿಸಿದೆ.

2026ರಿಂದ 2031ರ ವರೆಗಿನ ಅವಧಿಗೆ ಖೇಲೋ ಇಂಡಿಯಾ ಅಭಿಯಾನಕ್ಕಾಗಿ 29,054 ಕೋಟಿ ರೂ. ಬಿಡುಗಡೆ ಮಾಡಲು ಜು. 31ರಂದು ಸಚಿವ ಸಂಪುಟ ಒಪ್ಪಿಗೆ ಸೂಚಿಸಿತ್ತು. ಇದರಲ್ಲಿ 28,489 ಕೋಟಿ ರೂ.ಗಳನ್ನು ಕೇಂದ್ರ ಸರರ ನೀಡಲಿದ್ದು, ಉಳಿದ 565 ಕೋಟಿ ರೂ.ಗಳನ್ನು ರಾಜ್ಯಗಳು ಹಂಚಿಕೆ ಮಾಡಿಕೊಳ್ಳಬೇಕು ಎಂದು ಸೂಚಿಸಿದೆ. ರಾಜ್ಯಗಳಿಗೆ ವೆಚ್ಚದಲ್ಲಿ ಪಾಲು ನೀಡುವುದರಿಂದ ಯೋಜನೆಯ ಮೇಲೆ ಅವುಗಳ ಮಾಲಕತ್ವ ಹೆಚ್ಚಾಗುತ್ತದೆ. ಅಲ್ಲದೆ ತಮ್ಮ ರಾಜ್ಯಕ್ಕೆ ಬೇಕಾದಂತೆ ಸೌಲಭ್ಯವನ್ನು ವಿಸ್ತರಿಸಿಕೊಳ್ಳುವ ಆಯ್ಕೆ ಲಭ್ಯವಾಗುತ್ತದೆ ಎಂದು ಕೇಂದ್ರ ಹೇಳಿದೆ.

ಈಶಾನ್ಯ ರಾಜ್ಯಗಳು ಶೇ. 10ರಷ್ಟು ವೆಚ್ಚ ಭರಿಸಿದರೆ ಸಾಕು ಎಂದು ಕೇಂದ್ರ ತಿಳಿಸಿದೆ. ಅಲ್ಲದೆ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಪೂರ್ಣ ವೆಚ್ಚವನ್ನು ಕೇಂದ್ರವೇ ಭರಿಸುವುದಾಗಿ ತಿಳಿಸಿದೆ.

ಕೆನರಾ ಬ್ಯಾಂಕ್ Canara Bank (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ) ಎಆರ್‌ಎಮ್ ಶಾಖೆ ಮಣಿಪಾಲ ಇ-ಹರಾಜು ಮಾರಾಟ ಸೂಚನೆ

ಹರಾಜು ದಿನಾಂಕ: 24-08-2026 ಹರಾಜು ಸಮಯ: 11.00AM to 12.00PM

ಸೆಕ್ಯುರಿಟೈಜೇಶನ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿಇಂಟರೆಸ್ಟ್‌ಕಾಯಿದೆ, 2002ರಡಿಯಲ್ಲಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರಲ್ಲಿ ಓದಲಾದ ಜೊತೆಗೆ ನಿಯಮ 8(6) & 9ರ ನಿಬಂಧನೆಯಂತೆ ಸ್ಥಿರಾಸ್ತಿಯನ್ನು ದಿನಾಂಕ: 24-08-2026 ರಂದು "ಎಲ್ಲಿದೆಯೋ ಹಾಗೆ", ಅದು ಹೇಗಿದೆಯೋ ಹಾಗೆ" ಮತ್ತು ಅದರಲ್ಲಿ ಏನಿದೆಯೋ ಹಾಗೆ" ಮಾರಾಟಕ್ಕಾಗಿ ಇ-ಹರಾಜು (ಆನ್ ಲೈನ್ ಮೂಲಕ) ಮಾರಾಟದ ಸೂಚನೆಯನ್ನು ನೀಡಲಾಗಿದೆ.

ಈ ನೋಟೀಸಿನ ಮೂಲಕ ಸಾರ್ವಜನಿಕರಿಗೆ ಮತ್ತು ಸಾಲಗಾರ/ರು ಮತ್ತು ಜಾಮೀನುದಾರ/ರು ಇವರಿಗೆ